OS /742019 PW-1

**ದಿನಾಂಕಃ 21.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ಸಾಮಾನ್ಯವಾಗಿ ವರ್ಷಕ್ಕೆ ಒಂದು ಬಾರಿ ಜಮೀನಿಗೆ ಕಂದಾಯ ಕಟ್ಟುತ್ತಾರೆ ಎಂದರೆ ಸರಿ. ಎಂ.ಆರ್. 24/2000-01 ಮತ್ತು ಎಂ.ಆರ್ 17/2000-01 ಆಗುವ ಕಾಲಕ್ಕೆ ಕರೇನಾಯಕ ಬಿನ್ ಜುಂಜಾನಾಯಕನ ಮೊಮ್ಮಗ ಮೀಸೆ ಈರನಾಯಕ ಅರ್ಜಿ ಸಲ್ಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆರ್ ಆರ್ ಟಿ-212/2015-16 ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿದ್ದ ಕಾರಣ ಅಲ್ಲಿಯೇ ಇತ್ಯರ್ಥ ಪಡಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

2. ಪ್ರತಿವಾದಿಗಳ ಮೂಲ ಪುರುಷ ಕರೇನಾಯಕ ಬಿನ್ ಜುಂಜಾನಾಯಕ ನವರ ವಂಶಸ್ಥರ ಹೆಸರಿನಲ್ಲಿಯೇ ಖಾತೆ , ಪಹಣಿ ಮುಂದುವರೆಯುತ್ತಿದೆ ಎಂದರೆ ಸಾಕ್ಷಿಯು 2000-2001 ನೇ ಸಾಲಿನಿಂದ ಅವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ವಾದಿಯವರ ಮೂಲ ಪುರುಷ ಕರೇನಾಯಕ ಬಿನ್ ಜುಂಜಾನಾಯಕ ಎಂದಿಗೂ ದಾವಾ ಸ್ವತ್ತುಗಳನ್ನು ಕ್ರಯಕ್ಕೆ ಕೊಂಡಿರುವುದಿಲ್ಲ ಮತ್ತು ಸ್ವಾಧೀನಾನುಭವದಲ್ಲಿ ಯಾವತ್ತೂ ಇರಲಿಲ್ಲ ಎಂದರೆ ಸುಳ್ಳು. ಅದೇ ರೀತಿ ವಾದಿಯವರು ದಾವಾ ಸ್ವತ್ತುಗಳಲ್ಲಿ ಎಂದಿಗೂ ಸ್ವಾಧೀನದಲ್ಲಿರಲಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತುಗಳು ಪ್ರತಿವಾದಿಗಳ ಮೂಲ ಪುರುಷ ಕರೇನಾಯಕ ಬಿನ್ ಜುಂಜಾನಾಯಕ ಇವರ ವಂಶಸ್ಥರಿಗೆ ಸೇರಿದ್ದು ಎಂದರೆ ಸುಳ್ಳು. ಪ್ರತಿವಾದಿಗಳೇ ದಾವಾ ಸ್ವತ್ತಿನ ಹಕ್ಕು ದಾರರು ಮತ್ತು ಸ್ವಾಧೀನದಾರರು ಎಂದರೆ ಸುಳ್ಳು.

3. ಸ್ವಾರೇಕುಂಟೆ ಗ್ರಾಮದಲ್ಲಿ ನಮಗೆ ಸ.ನಂ.1 ಮತ್ತು ಸ.ನಂ.52 ಎರಡೂ ಜಮೀನುಗಳು ಇವೆ. ಸ.ನಂ.4/1 ರ ಜಮೀನು ನಮ್ಮ ಕುಟುಂಬಕ್ಕೆ ಸೇರಿದ 9 ನೇ ವಾದಿಯ ಹೆಸರಿನಲ್ಲಿದೆ ಎಂದರೆ ಸುಳ್ಳು. ಸ.ನಂ.4/2 ರ ಜಮೀನು ನಮ್ಮ ಕುಟುಂಬಕ್ಕೆ ಸೇರಿದ 10 ನೇ ವಾದಿಯ ಹೆಸರಿನಲ್ಲಿದೆ ಎಂದರೆ ಸುಳ್ಳು. ಸ.ನಂ.4/5 ರ ಜಮೀನು ನಮ್ಮ ಕುಟುಂಬಕ್ಕೆ ಸೇರಿದ 19 ರಿಂದ 23 ನೇ ವಾದಿಯವರ ತಂದೆಯ ಹೆಸರಿನಲ್ಲಿದೆ ಎಂದರೆ ಸುಳ್ಳು. ದಾವಾ ಸ್ವತ್ತುಗಳ ಮೂಲ ದಾಖಲೆಗಳನ್ನು 3 ಪ್ರತಿವಾದಿಗಳಿಂದ ನನ್ನ ತಂದೆ ಪಡೆದುಕೊಂಡು ಅವರ

ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆ ಹೂಡಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.